ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 64-71
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 'ಹೊಲಗೇರಿ ರಾಜಕುಮಾರ' ಕಾದಂಬರಿಯಲ್ಲಿ ದಲಿತ ಮತ್ತು ಮೇಲ್ವರ್ಗಗಳ ಸಂಬಂಧ

**ಡಾ. ಸುರೇಶ ಡಿ.ಪಿ.**
ಉಪನ್ಯಾಸಕರು, ಶ್ರೀಮತಿ ಕೋಟೆ ಬೋರಮ್ಮ ಪ್ರಥಮದರ್ಜೆ ಕಾಲೇಜು, ರಹೀಂ ನಗರ, ಚಳ್ಳಕೆರೆ

***Abstract:***
*ದಲಿತ ಸಾಹಿತ್ಯದಲ್ಲಿ ಅವಮಾನಿತರು, ಶೋಷಿತರು, ಬಡವರು ಬಹಿಷ್ಕೃತರು, ಅಸ್ಪೃಶ್ಯರು, ಬಂಡಾಯಗಾರರು, ಕ್ರಾಂತಿಕಾರರು, ಹಿಂಸೆ ಮತ್ತು ಕ್ರೌರ್ಯಕ್ಕೆ ತುತ್ತಾದವರು ಮಾನವೀಯ ಸಾಧ್ಯತೆಯಿಂದ ಮತ್ತು ಅಕ್ಷರ ಮಾಧ್ಯಮದಿಂದ ವಂಚಿತರು. ವ್ಯವಸ್ಥೆಯ ಮತ್ತು ಯಜಮಾನ್ಯ ಸಂಸ್ಕೃತಿಯ ವಿರೋಧಕರು, ನಾಗರಿಕ ಹಕ್ಕುಗಳ ಹೋರಾಟಗಾರರು ಮುಂತಾದ ಅರ್ಥಗಳಲ್ಲಿ ಬಳಸಲಾಗಿದೆ. ಅದರಲ್ಲಿ ವರ್ಣ, ವರ್ಗ, ಜಾತಿ, ಪಂಗಡ, ವೃತ್ತಿ ಹಾಗೂ ಜಾತಿಯ ಅಂಶಗಳು ಸೇರಿ ಬಲ ಮತ್ತು ಎಡ ಪಂಥೀಯ ವ್ಯಾಖ್ಯಾನಕ್ಕೂ ಒಗ್ಗೂಡಿಕೊಂಡು ಒಂದು ಬಗೆಯ ಸ್ಥಿತಿಸ್ಥಾಪಕತ್ವ ಗುಣವನ್ನು ಪಡೆದಿದೆ. ಸಹಜವಾಗಿ ಸಾಹಿತ್ಯಾಭಿವ್ಯಕ್ತಿಯೆಂದರೆ ಸಾಮಾನ್ಯ ಮನುಷ್ಯ ಎಂದರ್ಥ. ಇಂಥವನ್ನು ಓದು–ಬರಹ ಬಾರದವನು, ದುಡಿಮೆಗಾರ ಕೇಳಿಸಿಕೊಂಡವರು, ಆಸ್ಥಾನದಲ್ಲಿ ಜಾಗವಿಲ್ಲದವನು, ಪಂಡಿತನಲ್ಲದವನು ಆಗಿದ್ದು ಈ ವ್ಯಕ್ತಿ ಸಾಹಿತ್ಯ ಸೃಷ್ಟಿಗೆ ಕೈಹಾಕುವುದು ಸುಲಭದ ಮಾತಲ್ಲ. ಅದರಲ್ಲೂ ಇಂಡಿಯಾದಂಥ ದೇಶದಲ್ಲಿ ಅಸಾಧ್ಯ. ಏಕೆಂದರೆ ಜಾತಿ ಪದ್ಧತಿ ಇಲ್ಲಿ ಎಲ್ಲ ಶೋಷಣೆಗಳ ಮೂಲಸಾಧವಾಗಿ ಮುಂದುವರಿಯುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ 'ಹೊಲಗೇರಿ ರಾಜಕುಮಾರ' ಕಾದಂಬರಿಯಲ್ಲಿ ದಲಿತ ಮತ್ತು ಮೇಲ್ವರ್ಗಗಳ ಸಂಬಂಧ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ, ಹೊಲಗೇರಿ ರಾಜಕುಮಾರ.*

## ಪೀಠಿಕೆ

ದೇಶದ ಸಾಮಾಜಿಕತೆ ವ್ಯವಸ್ಥಿತವಾಗಿದ್ದು ಗೋಪುರ ಆಕಾರದಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ. ಪ್ರಮುಖವಾಗಿ ಕೆಳಗೆ ಸಿಕ್ಕ ಜನತೆಯು ಜಾಸ್ತಿಯಿದ್ದರೂ, ದೇವರು ಧರ್ಮದ ಹೆಸರಿನಲ್ಲಿ ನೀಚವಾದ ಅನ್ಯಾಯಕ್ಕೆ ಒಳಗಾದರೂ ಶೇ.94%ರಷ್ಟು ಜನಕ್ಕೆ ವಿದ್ಯೆಯ ನಿರಾಕರಣೆ ಆಯಿತು. ಸಮಾಜದ ಬಹುಸಂಖ್ಯಾತರ ಅಭಿರುಚಿಗಳನ್ನೆ ಇಲ್ಲವಾಗಿಸಿ ಅವರಲ್ಲಿದ್ದ ಸೃಜನಶೀಲ ಪ್ರತಿಭೆಯನ್ನು ಕಿತ್ತುಕೊಂಡು ಆತನಿಗೆ ಸಾಹಿತ್ಯಾಭಿವ್ಯಕ್ತಿಯು ಕಲ್ಪನೆಗೂ ಬಾರದಂತೆ ವ್ಯವಸ್ಥಿತಿವಾಗಿ ಮುಚ್ಚಿಡಲಾಯ್ತು. ಇಲ್ಲಿ "ಯಥಾ ರಾಜ ತಥಾ ಪ್ರಜಾ" ಎಂಬಂತೆ ಸಮಾಜ ಎಂಥದೋ ಅಂಥದೇ ಸಾಹಿತ್ಯ ಸೃಷ್ಟಿಯಾಯಿತು. ಉದ್ದೇಶಪೂರ್ವಕವಾಗಿ ಸಮಾಜದ ದೊಡ್ಡ ಪಾಲನ್ನು ಕತ್ತಲೆಯಲ್ಲಿಟ್ಟು ಅವರ ರಕ್ತ ಮಾಂಸವನ್ನುಂಡು ಕೊಬ್ಬಿದ ಮೇಲುವರ್ಗ ತನ್ನ ಧೋರಣೆಗಳನ್ನು ಸಾಹಿತ್ಯದಲ್ಲಿ ಸೇರಿಸಿತ್ತು. ಅದರಲ್ಲೂ ಸಾಮಾನ್ಯರಿಂದ ಕ್ರಾಂತಿಕಾರಿಗಳಂತೆ ಸಿಡಿದು ಬಂದವರನ್ನು ತನ್ನೊಳಗೆ ಸೇರಿಸಿಕೊಂಡು ಅವರನ್ನೂ ತಮ್ಮವರಲ್ಲಿ ಒಬ್ಬನನ್ನಾಗಿಸಿತು. ಇಷ್ಟಾದರೂ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯನ ಅಭಿವ್ಯಕ್ತಿಯಿದೆ. ಇದೂ ಸಹ

***Please cite this article as:*** ಸುರೇಶ ಡಿ.ಪಿ. (2025). 'ಹೊಲಗೇರಿ ರಾಜಕುಮಾರ' ಕಾದಂಬರಿಯಲ್ಲಿ ದಲಿತ ಮತ್ತು ಮೇಲ್ವರ್ಗಗಳ ಸಂಬಂಧ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 64–71

ಒಂದು ಚಳುವಳಿಯ ನಂತರವೇ ಆದದ್ದು. ಈ ಹಿನ್ನೆಲೆಯಲ್ಲಿ ವಚನಕಾರರು ಕಾಣುತ್ತಾರೆ. ವೈಧಿಕ ಧರ್ಮದ ವರ್ಣ ವ್ಯವಸ್ಥೆಯ ವಿರುದ್ಧವಾಗಿ ಸಿಡಿದು ನಿಂತ ವಚನ ಚಳುವಳಿಯು ಸಾಮಾನ್ಯನನ್ನು ಮುಟ್ಟಿತ್ತು. ವಿಶೇಷವಾಗಿ ಜಾತಿ ಅಸ್ಪೃಶ್ಯತೆ, ಪುರೋಹಿತ ಶಾಹಿಯ ಶೋಷಣೆಯ ವಿರುದ್ಧವಾದುದು ತೀವ್ರವಾದ ಪ್ರತಿಕ್ರಿಯೆ ಆಗಿತ್ತು. ಜನ ಎಚ್ಚೆತ್ತರು ಮಾತನಾಡಿದರು ಸ್ವಾಭಿಮಾನವನ್ನು ಕಂಡುಕೊಂಡರು ಅಂಬಿಗ, ಅಗಸ, ಸೌದೆ ಹೊರುವ, ಚಪ್ಪಲಿ ಹೊಲಿಯುವ, ದನಕಾಯುವವ, ಹೆಂಡ ಕಟ್ಟುವವ, ತಮಟೆ ಬಾರಿಸುವವ, ವೇಷ ಹಾಕುವವ ಹೀಗೆ ತರತರದ ಜನರು ಅಂದು ವಚನಗಳಲ್ಲಿ ಮೊದಲ ಬಾರಿಗೆ ಸೊಲ್ಲೆತ್ತುವಂತಾಯಿತು. ವಚನವು ಜನಸಮೂಹವನ್ನು ಜಾಗೃತಿ ಮಾಡುವ ಮಾಧ್ಯಮವಾಯಿತು. ಹೇಗೆಂದರೆ ವಚನಗಳನ್ನು ಊರೂರಿಗೆ ಪ್ರಚಾರ ಮಾಡಲು ಹಾಡಲು ಜನ ಇದ್ದರು. ನಡೆ–ನುಡಿಯಲ್ಲಿ ಪರಿಶುದ್ಧರಾಗಬೇಕು. ಅಂತಃಸ್ಸಾಕ್ಷಿಗೆ ಅನುಗುಣವಾಗಿ ನಡೆಯಬೇಕು. ಭಕ್ತರ ಕುಲವೊಂದೇ ಎಂಬುದು ಸಾಮಾನ್ಯ ಧೋರಣೆ ಆಯಿತು. ಕಾಯಕದಲ್ಲಿ ಮೇಲು–ಕೀಳು ಇಲ್ಲವೆಂದರು. ಹೀಗಾಗಿ ಅವನು ಯಾವ ಕಾಯಕದವನೇ ಆಗಲಿ ಅಭಿಮಾನದಿಂದ ಆ ಕಾಯಕದ ಪ್ರತಿಮೆಗಳ ಮೂಲಕವೇ ವಚನಗಳನ್ನು ಹೇಳಿದರು.

ಮೇಲ್ವರ್ಗದ ಜನರಿಗೆ ಅರಮನೆಗಳ ನಿರ್ಮಾಣ, ಮೃಷ್ಟಾನ್ನದ ಭೋಜನದ ಸೃಷ್ಟಿಗಾಗಿ ಬೆವರು ಸುರಿಸಿ ದುಡಿಯುವುದರಲ್ಲಿ ನಿರತರಾದವರು ದಲಿತ ಸಮುದಾಯ ಇವರಿಗೆ ಹಣೆ–ಬರಹ ವಿಧಿಯ ಮಂಕುಬೂದಿ ಎರೆಚಿ ಹಾಗೇ ಇರುವಂತೆ ಮಾಡಿದರು. ಸಾಮಾನ್ಯನ ಹಿಡಿ ಬದುಕು ಹಿಂಸೆಯ ವಾತಾವರಣದಲ್ಲಿ ನಡೆಯಿತು. ಶೋಷಣೆಯು ದೇವರ ಹೆಸರಿನಲ್ಲಿ ನಡೆದಿದ್ದರಿಂದ ಪ್ರಶ್ನೆ ಅನುಮಾನಗಳು ಏಳಲಿಲ್ಲ. ಏಕೆಂದರೆ ಪ್ರಭುವಿನ ಯುದ್ಧ, ಖುಷಿ ಇತ್ಯಾದಿಗಳನ್ನು ಅಟ್ಟಕ್ಕೇರಿಸಿ. ವ್ಯವಸ್ಥೆಯನ್ನು ಪೋಷಿಸಿಕೊಂಡು ಬರುವ ಸಾಹಿತ್ಯ ಸೃಷ್ಟಿಯಾಯಿತು. ಎಲ್ಲ ಮುಗಿದ ಮೇಲೆ ಪ್ರಭುವಿಗೆ ಬರುವ ವಿರಕ್ತಿಯೇ ಕಾವ್ಯದ ವಸ್ತುವಾಯಿತು. ಆದರೆ ಎಲ್ಲಿಯೂ ದಲಿತರನ್ನು ಕುರಿತು ಬಂದಿರುವ ಬಹುತೇಕ ಕೃತಿಗಳು ಅವರ ಬದುಕಿನ ನೈಜ ಚಿತ್ರಣಗಳು ಕೆಲವಷ್ಟೇ ಸಿಗುತ್ತವೆ. 70 ದಶಕದಲ್ಲಿ ಕಾಣಿಸಿಕೊಂಡು ದಮನಿತರ ತುಳಿತಕ್ಕೆ ಒಳಗಾದವರ ಜೀವನ ಕ್ರಮದಲ್ಲಿ ಕಂಡುಬರುವ ಆಹಾರ, ವಸ್ತ್ರ, ನೆರೆಯವರೊಂದಿಗೆ ಒಡನಾಟ, ಅಲ್ಲಲ್ಲಿ ಕಾಣುವ ಪ್ರೀತಿ, ಪ್ರೇಮ ಕೋಪ ಶಾಪ ಇತ್ಯಾದಿ ಗುಣಗಳು ಹಾಗೂ ಸ್ತ್ರೀಸ್ವಾತಂತ್ರ್ಯಕ್ಕೆ ಅವಕಾಶವನ್ನು ಕೊಡದಿರುವುದು ಇವೆಲ್ಲವುಗಳನ್ನು ದಲಿತ ಕಾದಂಬರಿಕಾರರಲ್ಲಿ ಪ್ರಮುಖರಾದ ಅರವಿಂದ ಮಾಲಗತ್ತಿ, ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಚೆನ್ನಣ್ಣ ವಾಲೀಕಾರ, ಸತ್ಯನಂದ ಪಾತ್ರೋಟ, ಬಿ.ಟಿ ಲಲಿತನಾಯಕ್, ಕೆ.ಬಿ ಸಿದ್ದಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಮುಳ್ಳೂರು ನಾಗರಾಜ್, ಮ.ನ. ಜವರಯ್ಯ ಮೊದಲಾದವರು ದಲಿತ ಸಾಹಿತ್ಯಕ್ಕೆ ಒಂದು ಸ್ಥಾನಮಾನವನ್ನು ತಂದು ಕೊಡಲಿಕ್ಕೆ ಅಹರ್ನಿಶಿ ಕೆಲಸ ಮಾಡಿದ್ದಾರೆ. ಇವರ ಲೇಖನಗಳು, ಆತ್ಮಕಥೆಗಳು, ಕಾದಂಬರಿಗಳು, ಸಾಹಿತ್ಯ ವೇದಿಕೆ, ಭಾಷಣಗಳು, ಆಯಾಯ ಊರಿನ ದಲಿತರು, ಯುವಕರುಗಳಿಗೆ ದಾರಿದೀಪವಾಗುವಂತಹ ಕರ್ತವ್ಯಗಳನ್ನು ಮಾಡಿದರು. ಮೊದಲು ಅನಕ್ಷರತೆಯನ್ನು ತೊಲಗಿಸಲು ಶಿಕ್ಷಣದ ತುರ್ತನ್ನು ಒತ್ತಿ ಹೇಳಿದರು. ಅದಕ್ಕಾಗಿ ಸರ್ಕಾರದಿಂದ ಲಭಿಸುವಂಥ ಸೌಲಭ್ಯಗಳನ್ನು ಕುರಿತು ತಿಳುವಳಿಕೆಯನ್ನು ನೀಡುತ್ತಾರೆ. ಕೆಲವೊಮ್ಮೆ ಕವಿಗೆ ಕವಿ ಮುನಿವಂತೆ ಹಾಗೆ ಜಾತಿ ಜಾತಿಯನ್ನು ಕಂಡರೆ ಆಗಲ್ಲ. ಎಲ್ಲಾದರೂ ಒಂದು ಕಡೆ ಮಾತ್ಸರ್ಯ ತುಂಬಿರುತ್ತದೆ. ಕಾರಣ ದಲಿತ ವಿದ್ಯಾವಂತರಲ್ಲಿಯೇ ಹೊಸದಾಗಿ ಸೃಷ್ಟಿಯಾದ ಸ್ವಪ್ರತಿಷ್ಠೆ ಆತನಲ್ಲಿ ಬಿಗುಮಾನವನ್ನು ಹೊಂದಿ ದಲಿತ ಸಾಹಿತ್ಯ ಮೂಲ ಗುರಿಯಾಗುವುದೆಂದು ಮರೆತುಬಿಡುವಷ್ಟರ ಮೆಟ್ಟಿಗೆ

ಬದಲಾವಣೆಯಾಯಿತು ಇಂತಹ ಕಹಿ ಸಂದರ್ಭಗಳು ಏನೇ ಇರಲಿ ಬರಲಿ ದಲಿತರಲ್ಲಿ ಉಂಟುಮಾಡಿದ ಹೋರಾಟದ ಕಿಚ್ಚು ತಣ್ಣಗಾಗಲು ಸಾಧ್ಯವಿಲ್ಲ.

ದಲಿತ ಸಾಹಿತ್ಯಕ್ಕೆ ಕನ್ನಡ ಭಾಷಾ ಸಾಹಿತ್ಯದ ಛಾಯೆ ಇದ್ದೇ ಇರುತ್ತದೆ. ಕಾರಣ ಕನ್ನಡ ಸಾಹಿತ್ಯವನ್ನು ಭಾರತದ ಇತರೆ ಸಾಹಿತ್ಯಗಳೊಂದಿಗೆ ಹೋಲಿಸಿ ನೋಡಿದರೆ ಅದು ಸಂಪ್ರದಾಯವನ್ನು ಮುರಿಯುವ ಧೋರಣೆ ಮತ್ತು ಹೊಸ ಅರಿವು ಸಾಹಿತ್ಯ ಕ್ಷೇತ್ರದಲ್ಲಿ ಕಾಲಕಾಲಕ್ಕೆ ನಡೆಯುತ್ತ ಬಂದಿದೆ. 10ನೇ ಶತಮಾನದ ಕಾವ್ಯಗಳಲ್ಲಿಯೇ ಈ ಪ್ರತಿಭಟನೆಯ ಕುರುಹುಗಳು ನಮಗೆ ಲಭಿಸುತ್ತವೆ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಧ್ವನಿಸಿದ ಪಂಪನ ಆದಿಪುರಾಣ ಕಾವ್ಯ ವಾಗ್ದೇವಿಯ ಭಂಡಾರದ ಮುದ್ರೆಯನ್ನು ಒಡೆದ ರನ್ನನ ಗದಾಯುದ್ಧ ಕಾವ್ಯಗಳಲ್ಲಿ ಧರ್ಮ ಹಾಗೂ ಸಂಪ್ರದಾಯದ ವಿರುದ್ಧ ಬಂಡೆದ್ದ ಜನ್ನನ ಯಶೋಧರ ಚರಿತೆ ಇಂಥವುಗಳಲ್ಲಿ ಕ್ರಾಂತಿ ಧೋರಣೆಯ ಹಿನ್ನೆಲೆಯಾಗಿರುವುದನ್ನು ಕಾಣುವುದಕ್ಕೆ ಸಾಧ್ಯವಿದೆ.

ಆಧುನಿಕ ಸಾಹಿತ್ಯದಲ್ಲಿ ಕಾರಂತ, ನಿರಂಜನ, ಕಟ್ಟಿಮನಿ ಇವರ ಕಾದಂಬರಿಗಳಲ್ಲಿ ನಿಮ್ನವರ್ಗದ ಜನತೆಯ ಹೋರಾಟದ ವಸ್ತುವಾಗುತ್ತ ಬಂದಿದೆ. ಬೇಂದ್ರೆ, ಕುವೆಂಪು, ಅಡಿಗ ಅವರ ಕಾವ್ಯದಲ್ಲಿ ಮಧ್ಯಮವರ್ಗ ಮತ್ತು ನಿಮ್ನವರ್ಗದ ದೀನ–ದಲಿತರ ಶೋಷಣೆಯ ವಿಷಯಗಳು ಕಾವ್ಯಕ್ಕೆ ವಸ್ತುವಾಗಿವೆ. ಬೇಂದ್ರೆಯವರ 'ನರಬಲಿ' ಹೆಣದ ಹಿಂದೆ ಪದ್ಯಗಳನ್ನು ಹೆಸರಿಸಬಹುದು. ನೂರು ದೇವರನ್ನೆಲ್ಲ ನೂಕಾಚೆ ದೂರ' ಎಂದು ಹೇಳಿದ ಕುವೆಂಪು ಅಲ್ಲದೆ ಶೂದ್ರತಪಸ್ವಿ, ಬಲಿದಾನ ಜಲಗಾರ, ಮುಂತಾದ ಪದ್ಯ, ನಾಟಕಗಳನ್ನು ಹೆಸರಿಸಬಹುದು ಅಡಿಗರ 'ಹಸಿದಿಹುದು ಹೊಟ್ಟೆ ಕೊಡು ಅನ್ನವನ್ನು' ಎನ್ನುವ ಇದು ಮೊದಲು ಪದ್ಯವನ್ನು ಮಧ್ಯಮವರ್ಗ ಹಾಗೂ ನಿಮ್ನವರ್ಗದವರ ವೇದನೆ, ವ್ಯಥೆ, ಹಸಿವು, ದಾರಿದ್ರ್ಯ ಮುಂತಾದ ಭಾವನೆಗಳಿಗೆ ಹೆಚ್ಚಾಗಿ ಬಾಯಿ ಬಂದಿದೆ ಸಾಹಿತ್ಯ ಮಾನವೀಯವಾಗಬೇಕು. ಕಾವ್ಯ ಮಾನವೀಯತೆಯ ಮಿಡಿತವಾಗಬೇಕು. ಇಂಡಿಯಾ ಜಾತೀಯತೆಯ ದಳ್ಳುರಿಯಲ್ಲಿ ಉರಿಯುತ್ತದೆ. ಯಾಕೆಂದರೆ ದಲಿತರ ಕೊಲೆಯಾಗದ. ಅವರ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡದ. ಅವರ ಗುಡಿಸಲಿಗೆ ಬೆಂಕಿ ಹಚ್ಚದ ಒಂದು ದಿನವನ್ನು ಕಾಣಲು ಸಾಧ್ಯವಿಲ್ಲ. ರಕ್ತಸಿಕ್ತವಾದ ಇತಿಹಾಸದ ಪುಟಗಳಲ್ಲಿ ಮನುಷ್ಯತ್ವವುಳ್ಳವರ ದರ್ಶನ ದುರ್ಲಭವಾದದು. ಕಾರಣ ಜಮೀನುದಾರಿ, ಬಂಡವಾಳಶಾಹಿಗಳ ಉಪಟಳದಿಂದ ದಲಿತರ ಬದುಕು ಬರ್ಬರವಾಗಿದೆ ಹಾಗಾಗಿ ಭಾರತದಲ್ಲಿ ಜಾತಿಪದ್ಧತಿಯು ಮನುಷ್ಯರಲ್ಲಿ ಪ್ರೀತಿ–ವಿಶ್ವಾಸವನ್ನು ಇಲ್ಲವಾಗಿಸಿದೆ.

ಇಡೀ ಪ್ರಪಂಚದಲ್ಲಿ ಮನುಷ್ಯ ನಿರ್ಮಿಸಿರುವ ಜಾತೀಯತೆಯ ಕಂದಕಗಳು ಅಗಾಧವಾದವು ಆದ್ದರಿಂದ ದಲಿತ ಬದುಕಿನಲ್ಲಿ ಶೋಧ ನಡೆಸುವುದಾದರೆ ಎಲ್ಲ ರಂಗಗಳಲ್ಲಿಯೂ ವರ್ಗಗಳನ್ನು ಸೃಷ್ಟಿ ಮಾಡಿದ್ದಾನೆ. ಅಂದರೆ ಮಾನವನಲ್ಲಿ ಸ್ಥೂಲವಾಗಿ ಉನ್ನತ ವರ್ಗ ಮತ್ತು ನಿಮ್ನವರ್ಗಗಳೆಂದು ಭಾಗ ಮಾಡುತ್ತಾರೆ. ಇನ್ನೂ ಸಹಜವಾಗಿಯೇ ಮೇಲುಜಾತಿ ಮತ್ತು ಕೆಳಜಾತಿ ಎಂದು ಹೆಸರಿಸಬಹುದು. ಈ ವರ್ಗ ಸಂಕರಗಳು ಮೊದಲು ಮನಸ್ಸನಲ್ಲಿದ್ದು ತದನಂತರ ಭೌತಿಕ ಸ್ವರೂಪವನ್ನು ಪಡೆದು ಸ್ವಪ್ರತಿಷ್ಠೆ ಸಾಂಕೇತಿಕವಾಗಿ ನಿರ್ಮಾಣವಾದವು. ಇದಕ್ಕೆ ಕಾರಣ ಹೆಚ್ಚು ಮೇಧಾಶಕ್ತಿಯುಳ್ಳ ಮಾನವ ತನ್ನ ಕೆಲಸವನ್ನು ಮಾಡಿಸುವ ಸಲುವಾಗಿ ಇತರೆ ವ್ಯಕ್ತಿಗಳಲ್ಲಿರುವ ಒರಟು ಮತ್ತು ದಡ್ಡತನದ ದುರುಪಯೋಗ ಪಡೆಯುವುದಕ್ಕಾಗಿ ವರ್ಗವನ್ನು ಸೃಷ್ಟಿಮಾಡಿದನು. ಇದನ್ನು ಯಾರು? ಯಾಕೆ? ಏನು? ಎಂದು ಪ್ರಶ್ನೆ ಮಾಡಲಿಲ್ಲವೋ ಆಗ ಉನ್ನತವರ್ಗದವರು ತನ್ನ ಆಸೆ–ಆಕಾಂಕ್ಷೆಗಳು ಸಾಧನೆಗಳಿಗೆ ನಿಮ್ನವರ್ಗದ ಸಹಕಾರವನ್ನು ಶೋಷಣೆ ಎಂದು ಪ್ರಕಟಪಡಿಸಿದೆ. ಸೂಕ್ಷ್ಮವಾಗಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಾನೆ.

ಹಾಗೇ ನಮಗೆ ಜೀವನದುದ್ದಕ್ಕೂ ಇದೇ ರೀತಿಯ ಸೇವೆಯು ಸಿಗಬೇಕೆಂದರೆ ಕೆಳವರ್ಗದವನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ದೇವರು ಧರ್ಮ ಸತ್ಯದ ಲೇಪನವನ್ನು ಸವರಿಬಿಡುತ್ತಾರೆ. ಈ ಧರ್ಮ–ದೇವರು ಅರಿಯದವರಿಗೆ ಇದೊಂದು ಅಫೀಮು ಇದ್ದಂತೆ ಒಂದು ಬಾರಿ ಅದರಲ್ಲಿ ಬಿದ್ದರೆ ನಾವು ಜೀವನಪರ್ಯಂತ ಅದರ ಸುತ್ತಣ ಗಿರಕಿ ಹೊಡೆಯುತ್ತದೆ. ಸಮುದ್ರದ ಕಪ್ಪೆಯಾಗುವುದರ ಬದಲು ಬಾವಿ ಕಪ್ಪೆಯಾಗಿ ಇದೇ ದೊಡ್ಡ ಪ್ರಪಂಚವೆನ್ನುವಂತೆ. ಉನ್ನತವರ್ಗದವರು ನಿಮ್ನವರ್ಗದವರಿಗೆ ತಯಾರು ಮಾಡಿಬಿಡುತ್ತಾರೆ. ಇದೇ ರೀತಿಯಲ್ಲಿ ನಿಮ್ನವರ್ಗದವರಲ್ಲಿಯೇ ಹಲವು ಪಂಗಡಗಳನ್ನು ಕಾಣುವುದಕ್ಕೆ ಸಾಧ್ಯವಿದೆ. ಇದನ್ನು ಜಾತಿ ಸಂಕರವೆಂದು ಕರೆಯಬಹುದಾಗಿದೆ. ಉನ್ನತವರ್ಗದವರ ಜೊತೆಗೆ ತಿಳುವಳಿಕೆಯಿಲ್ಲದೆ ಅವರ ಅಡಿಯಾಳಗಿದ್ದರೆ ನಿಮ್ನವರ್ಗದಲ್ಲಿ ಗೊತ್ತಿದ್ದರೂ ತಮ್ಮವರನ್ನು ಶೋಷಣೆ ಮಾಡುತ್ತಾರೆ. ಅಧಿಕಾರಕ್ಕಾಗಿ, ಹಣದಾಸೆಗಾಗಿ, ಕಾಮ ತೃಷೆಗಾಗಿ ತಮ್ಮ ಕೆಳಗಿನವರನ್ನು ಸಮಪಾಟಿಗಳನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳಬಹುದು ಎಂಬುದನ್ನು ಕರಗತವಾಗಿರುತ್ತದೆ. ಇಲ್ಲಿ ಅನುಕಂಪಕ್ಕೆ ಜಾಗವಿಲ್ಲ, ಕೇವಲ ದರ್ಪ, ಅಹಂಕಾರ ಇತ್ಯಾದಿಗಳಿಗೆ ಆದ್ಯತೆಯನ್ನು ಕೊಟ್ಟಿರುತ್ತಾರೆ.

ವರ್ಣ ಸಂಕರ ವ್ಯವಸ್ಥೆಯಲ್ಲಿ ಶೂದ್ರರಿಗೆ ಧಾರ್ಮಿಕತೆಯು ಊರ್ಧ್ವಮುಖ ಚಲನೆಗೆ ಅಡ್ಡಿಯಾದರೆ ಈಗ ಅದೇ ಆರ್ಥಿಕ ವ್ಯವಸ್ಥೆಯಲ್ಲಿ ಅವನಿಗೆ ಅಧೋಮುಖ ಚಲನೆಗೆ ಅಡ್ಡಿಯಾಗಿ ಶೂದ್ರ ವರ್ಗದಲ್ಲಿ ಬಡತನವು ದಿನೇ ದಿನೇ ಅಧಿಕವಾಗುತ್ತಿದೆ ಆದರೆ ಮೇಲ್ವರ್ಗಗಳ ಅಧೋಮುಖ ಚಲನೆಯು ಇಂದು ಅವರ ಭೋಗ ಜೀವನಕ್ಕೆ ಸಾಧನವಾಗಿದೆ. ಊರ್ಧ್ವಮುಖ ಚಲನೆಯೇ ಅಂತರ್ಮುಖೀ ಜೀವನ. ಅಧೋಮುಖ ಚಲನೆಯೇ ಬಹಿರಂಗದ ಲೌಕಿಕ ಬದುಕು ಈ ಹಿನ್ನೆಲೆಯಲ್ಲಿ 'ಹೊಲಗೇರಿಯ ರಾಜಕುಮಾರ' ಕಾದಂಬರಿಯಲ್ಲಿ ಬರುವ ಕೆಲವು ಸನ್ನಿವೇಶಗಳ ಪರಿಶೀಲನೆಯಿಂದ ಇದನ್ನು ಮುಂದೆ ವಿಶ್ಲೇಷಿಸಿಲಾಗಿದೆ.

ಶಿವರುದ್ರ ಕಲ್ಲೋಳಿಕರ್ ಅವರು ರಚಿಸಿರುವ **'ಹೊಲಗೇರಿಯ ರಾಜಕುಮಾರ'** ಕಾದಂಬರಿಯು ಬೆಳಗಾವಿಯ ಸುತ್ತ–ಮುತ್ತಲಿನ ಘಟನೆಗಳನ್ನಾಧರಿಸಿ ಜೊತೆಗೆ ರಾಜರ ಕಾಲದ ನೈಜ ಸ್ವರೂಪ ಒಂದನ್ನು ಲೇಪನಮಾಡಿಕೊಂಡು ರಚಿಸಿರುತ್ತಾರೆ. ಕೃತಿಯ ಐಡೆಂಟಿಟಿಯು ನೇರವಾಗಿ ದಲಿತ ಮತ್ತು ಮೇಲುವರ್ಗದ ಹೆಸರುಗಳನ್ನೇ ಸೂಚಿಸುತ್ತವೆ. ಸೂತಪುತ್ರನೆನಿಸಿದ ಕರ್ಣ ಕುಂತಿಯ ಮಗನಾದರೂ ತಾನು ಕ್ಷತ್ರೀಯ ಎಂದು ತಿಳಿದ ಮೇಲು ದುರ್ಯೋಧನ ಗೆಳೆತನಕ್ಕೆ ಮನಸೋತು ತಾನು ಸೂತನಾಗಿಯೇ ಉಳಿದು ಬಿಡುತ್ತಾನೆ. ಅದೇ ರೀತಿ ಹೊಲಗೇರಿಯ ರಾಜಕುಮಾರದಲ್ಲಿ ಮಾದೇವ ಕಾಂಬಳೆಯು ಮೂಲತಃ ತಾನು ಮರಾಠನಾದರೂ ಬೆಳೆದು ಬದುಕುವುದು ಮಾತ್ರ ವಡಗಾಂವ ಗ್ರಾಮದಲ್ಲಿ ನಡು–ನಡುವೆ ಕಾಂಬಳೆಗೂ ಕೂಡ ತನ್ನ ಜನ್ಮ ರಹಸ್ಯವನ್ನು ತಿಳಿಯಬೇಕೆಂಬ ಕುತೂಹಲ ಬೆಟ್ಟದಷ್ಟಿರುತ್ತದೆ. ಆದರೆ ಗೊತ್ತಾದ ಮೇಲೆ ಕಾಂಬಳೆ, ನಿರ್ಲಿಪ್ತನಾಗಿ ಮೌನಕ್ಕೆ ಜಾರುತ್ತಾನೆ "ಅದು ಕಾಂಬಳೇನ ಇರಬೇಕು ಬಿಡ್ರಿ. ಯಾಕ ಅಂದ್ರ ಆ ಪ್ಯೂನ್ ಗೋಲ್ಫೆ ಅದಾನಲ್ಲ ಅಂವಾ ಹೇಳ್ತಾ ಇದ್ದ" ನಿಮೌವ್ರ ಇಡೀ ಕಾಲೇಜಕ್ಕ ಕಾಲೇಜು ಎಲ್ಲಾ ಬ್ರಾಹ್ಮಣರಿದೀರಿ ಆದ್ರ ಒಬ್ಬ ಢೇಡ ಹುಡುಗ ರ್‍ಯಾಂಕ್ ಬಂದಾನು ಅಂತ ಅದನ್ನು ನೋಡಿದ್ರ ಆ ಕಾಂಬಳೆ ಮಹಾರ ಇರಬೇಕು" ಎಂಬುವುದನ್ನು ತನ್ನ ಕಿವಿಯಾರೆ ಕೇಳಿದ ವರದಿಯನ್ನು ದೇಶಪಾಂಡೆ ಒಪ್ಪಿಸಿದರು" (ಹೊಲಗೇರಿಯ ರಾಜಕುಮಾರ, ಕಾದಂಬರಿ ಪು.ಸಂ,46–47). ಮಾದೇವ ಕಾಂಬಳೆ ಓದುತ್ತಿದ್ದ ಆರ್. ಪಿ. ಡಿ. ಕಾಲೇಜಿನ ಅಧ್ಯಾಪಕರಾದ ಗಾಡಗೀಳಾ, ಜೋಶಿ, ದೇಶಪಾಂಡೆ ಇನ್ನೂ ಮುಂತಾದವರು ಆ ವರ್ಷದ ಬೋರ್ಡ್ ರಿಸೆಲ್ಟ್ ಕಮ್ಮೀಯಾಗಿರುವ ಕಾರಣ ಈ ವರ್ಷದಲ್ಲಿ ನಮ್ಮ ವಿಭಾಗಗಳಿಗೆ ಅಡ್ಮಿಷನ್ ಸಂಖ್ಯೆ

ಕಮ್ಮಿಯಾಗುತ್ತದೆಂದು ಚರ್ಚಿಸುತ್ತಿದ್ದರು. ಅದೃಷ್ಟವಷಾತ್ ಆ ಕಾಲೇಜಿಗೆ ಒಂದು ರ್‍ಯಾಂಕ್ ಬಂದು ಬಿಟ್ಟಿತ್ತು. ಆ ರ್‍ಯಾಂಕ್ ಯಾರು ಪಡೆದಿರಬಹುದೆಂದು ಚರ್ಚೆ ಆಗುತ್ತಿರುವಾಗ ಆ ಕಾಲೇಜಿನ ಬ್ರಾಹ್ಮಣವರ್ಗದ ಅನುಷಾ ದೇಶಪಾಂಡೆ, ಸಂಜುಕುಲಕರ್ಣಿನ, ದೀಕ್ಷೀತ್ ಈ ಮೂವರಲ್ಲಿ ಯಾರಿಗೋ ಒಬ್ಬರಿಗೇ ರ್‍ಯಾಂಕ್ ಬಂದಿರಬಹುದೆಂದು ಊಹಿಸುತ್ತಿದ್ದಾಗ. ಅ ಕಾಲೇಜಿನ ಡಿಗ್ರೂಪ್ ನೌಕರ ಗೋಲ್ಫೆ ಎಂಬುವನು ಈ ಕಾಲೇಜಿಗೆ ಬಹುತೇಕ ಬ್ರಾಹ್ಮಣರೇ ವಿದ್ಯಾರ್ಥಿಗಳಿದ್ದರೆ ಆದರೆ ಅವರ್‍ಯಾರು ರ್‍ಯಾಂಕ್ ಪಡೆದಿಲ್ಲ ಬದಲಾಗಿ ಒಬ್ಬ ದಲಿತ ಹುಡುಗ ಮಾದೇವ ಕಾಂಬಳೆ ಎಂಬುವನು ರ್‍ಯಾಂಕ್ ಪಡೆದಿದ್ದಾನೆ ಎಂದ ತಕ್ಷಣ ಉಳಿದವರ ಕಿವಿಯಲ್ಲಾ ನೆಟ್ಟಗಾಗಿ ಕಾಂಬಳೆ ಅಂದರೇ ಮಹಾರ್ ಜಾತಿ ಇರಬೇಕು ಎಂದು ಅರ್ಥೈಸಿಕೊಂಡು ಕೊನೆಗೆ ಅಲ್ಲಿಯು ಕೂಡ ತಮ್ಮ ಜನಾಂಗದವರು ರ್‍ಯಾಂಕ್ ಪಡೆದಿಲ್ಲವೆಂಬ ಬೇಸರದಲ್ಲಿ ನಮ್ಮ ಸವರ್ಣಮಂದಿಗೂ ಕಾಂಬಳೆ ಅಂತ ಹೆಸರ್‍ಯಾಕೆ ಇರ್ಬಾದು? ಎನ್ನುತ್ತಾ ಜೋಶಿ, ದೇಶಪಾಂಡೆ, ಗಾಡಗೀಳ ಮೊದಲಾದವರು ಚರ್ಚೆ ಮಾಡುತ್ತಾ. ಆ ದಡ್ಡ ಕಾಂಬಳೆ ಹೇಗೆ ಪಾಸ್ ಮಾಡಿದ ಅವನಿಗೆ ಬ್ರಾಹ್ಮಣರನ್ನು ಕಂಡರೇ ಆಗೋದೆ ಇಲ್ಲ ಆದರು ರ್‍ಯಾಂಕ್ ಬರುವಷ್ಟು ಬುದ್ಧಿವಂತ ಹೇಗಾಯಿತು ಎಂದು ತಿಳಿಯಬಲ್ಲದು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೇ ಅ ಪ್ರೊಫೆಸರ್‌ಗಳಿಗೆ ತಮ್ಮ ಜಾತಿಯವ ಜಸ್ಟ್ ಪಾಸ್ ಆಗಿದ್ದರು ಕೂಡ ಅದನ್ನು ರ್‍ಯಾಂಕ್ ಪಡೆದ ಮಟ್ಟಕ್ಕೆ ಸಂಭ್ರಮಿಸುತ್ತಿದ್ದರು. ಆದರೇ ತಮಗಿಂತ ಕೆಳಮಟ್ಟದ ವ್ಯಕ್ತಿಯೋರ್ವ ತಮ್ಮ ಜ್ಞಾನಮಟ್ಟಕ್ಕೆ ಸರಿಸಾಟಿಯಾಗಬಲ್ಲಂತಹ ವ್ಯಕ್ತಿಯು ಹುಟ್ಟಿಕೊಂಡನಲ್ಲ ಇಂತಹ ಸಾಧಕರಿಂದ ಭವಿಷ್ಯದಲ್ಲಿ ಕೆಳವರ್ಗದವರು ಇವನನ್ನೇ ಮಾದರಿಯಾಗಿರಿಸಿಕೊಂಡು ಶಿಕ್ಷಣ ಪಡೆದಲ್ಲಿ ನಮ್ಮ ಮಟ್ಟಕ್ಕೆ ಬಂದು ನಿಂತಾಗ ನಮ್ಮ ಸ್ಥಾನ ಅಲುಗಾಡುತ್ತದೆ. ಏಕೆಂದರೇ ದಲಿತರಿಗೆ ದೈಹಿಕ ಶ್ರಮ ಹುಟ್ಟಿನಿಂದ ಬಂದುದ್ದು ಅದರೇ ಅದಕ್ಕಿಂತಲೂ ಸುಲಭ ಬುದ್ಧಿ ಸಾಮರ್ಥ್ಯ ಹೊಂದಿದ್ದರೆ ನಾವು ಉತ್ತಮ ಸ್ಥಾನಗಳಿಸಬಹುದೆಂಬ ಆಕಾಂಕ್ಷೆಗಳು ಬೆಳೆದರೆ ನಮ್ಮ ಸ್ಥಾನ ಕಳೆದುಕೊಂಡು ಬುದ್ಧಿಯಲ್ಲಿ ಮಣ್ಣು ಪಾಲಾಗಿ ದೈಹಿಕ ಶ್ರಮ ಪಡಲಾಗದೇ ಇಡೀ ಜೀವನ ಕಷ್ಟಮಯವಾಗುತ್ತದೆ ಎಂದು ಪರಿತಪಿಸುತ್ತಾರೆ.

ಶಿವರುದ್ರ ಕಲ್ಲೋಳಿಕರ್ ಈ ಪ್ರಸಂಗವನ್ನು ಅತ್ಯಂತ ಸೊಗಸಾಗಿ ಚಿತ್ರಿಸುತ್ತ. ಮಾದೇವನಂತವರು ಮತ್ತಷ್ಟು ಹುಟ್ಟಿ ಬರಲಿ ಎಂದು ಆಶಿಸುತ್ತಾರೆ. ಹಾಗೆಯೇ ಎಷ್ಟೋ ಕಡೆ ಅಂಬೇಡ್ಕರ್, ಜ್ಯೋತಿಬಾಪುಲೆ ಮುಂತಾದವರ ಪ್ರಸಂಗವನ್ನು ಚರ್ಚಿಸುತ್ತ ಇವರ ಸಾಧನೆಗೂ ಬ್ರಾಹ್ಮಣವರ್ಗವೇ ಅವಕಾಶ ನೀಡಿತ್ತೆಂದು ನುಡಿಯುತ್ತಾರೆ. ಪ್ರಸ್ತುತ ಗಮನಿಸುವುದಾದರೆ ನಮ್ಮ ಮಾಜಿ ರಾಷ್ಟ್ರಪತಿ ಎ.ಪಿ.ಜೆ ಅಬ್ದುಲ್‌ಕಲಾಂ ಒಬ್ಬ ಶ್ರೇಷ್ಠ ವಿಜ್ಞಾನಿಯಾಗುವುದಕ್ಕೆ ಆ ರಾಮೇಶ್ವರ ಊರಿನ ಓರ್ವ ಬ್ರಾಹ್ಮಣ ಎಂದರೇ ತಪ್ಪಾಗಲಾರದು. ಹಾಗೆಯೇ 15ನೇ ಶತಮಾನದ ಕಾಲಘಟ್ಟದಲ್ಲಿ ಬದುಕಿದ ಶಿಶುನಾಳ ಷರೀಪರಿಗೆ ಗುರುಗೋವಿಂದ ಭಟ್ಟರು ಧೀಕ್ಷೆ ನೀಡಿ ಜ್ಞಾನವನ್ನು ಹಂಚುತ್ತಾರೆ. ಇಲ್ಲಿ ಧರ್ಮವಾಗಲೀ, ಜಾತಿಯಾಗಲೀ, ಅಡ್ಡಿ ಬರಲೇ ಇಲ್ಲ ಒಂದು ವೇಳೆ ತಾವ್ಯಾಕೆ ಕಲಿಸಬೇಕು ಎಂದು ಹೆಜ್ಜೆ ಹಿಂದಿಟಿದ್ದರೆ, ಇವತ್ತು ನಮ್ಮ ದೇಶದಲ್ಲಿ ಈ ಮಹನೀಯರು ಪ್ರಸಿದ್ಧರಾಗಿ ತಮ್ಮ ಕ್ಷೇತ್ರಗಳಲ್ಲಿ ಅಪಾರವಾದ ಕೊಡುಗೆಯನ್ನು ಕೊಡದಿದ್ದರೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಕಾಲವಾಗುತ್ತಿದ್ದರು ಆ ದೃಷ್ಟಿಯಿಂದ ಆಯಾಯ ಕಾಲಘಟ್ಟದಲ್ಲಿ ಏನೇ ನಡೆದಿರಲಿ ಕೇವಲ ಒಳ್ಳೆಯದನ್ನು ಸ್ವೀಕರಿಸುವ ಮನೋಭಾವ ನಮ್ಮದಾಗಿರಬೇಕೆಂದು ಲೇಖಕರ ಅಭಿಪ್ರಾಯವಾಗಿದೆ.

“ಏ ಬೋಸ್ಡಿ ಗಂಡಗ ಹೆಂಗ ಮಾತಾಡಬೇಕ ಅನ್ನೂದ ಖಬರ ಐತೇನ ನಿನಗ? ನೀನರೆ ಏನ ಮಾಡಿ ನಿನ್ನ ಜಾತಿ ಸಂಸ್ಕಾರ ಹಾಂಗೈತೆ” ಎಂದು

ಅವನೆಂದಾಗ ಆಕೆಗೆ ಸಹಿಸಲಾಗಲಿಲ್ಲ "ಮಾತ ಮಾತಿಗೆ ಜಾತಿ ತೆಗಿಬ್ಯಾಡ ಅಷ್ಟ ದಿಮಾಕ ಇದ್ರ ಮರಾಠೇರ ಓಣ್ಯಾಗ ಮನಿ ಭಾಡಿಗಿ ಹಿಡಿ ನೋಡೋಣ ಯಾರಾರೇ ನಿನಗ ಬಾಡಿಗೆ ಕೊಡ್ತಾರೇನ ನೋಡ್ತೀನಿ" ಅಂದಳು (ಹೊಲಗೇರಿಯ ರಾಜಕುಮಾರ, ಕಾದಂಬರಿ, ಪು.ಸಂ.92). ಕಾಂಬಳೆ ಮತ್ತು ಸುಮತಿ ಒಂದೇ ಜಾತಿಯವರೆಂದು ಪ್ರೀತಿಸಿ ಮದುವೆಯಾದವರು ಹೊಸದರಲ್ಲಿ ಸಂಸಾರ ಚೆನ್ನಾಗಿ ನಡಿತಿತ್ತು ಪ್ರೀತಿಯ ಸಂಕೇತವಾಗಿ ಎರಡು ಮಕ್ಕಳು ಹುಟ್ಟಿದರು ಹಾಗೂ ಹೀಗೂ ಬರುತ್ತಿದ್ದ ಸಂಬಳದಲ್ಲಿ ಅನ್ಯೋನ್ಯವಾಗಿದ್ದರು ಆದರೇ ಈ ಕಾಂಬಳೆ ಪ್ರಾರಂಭದಲ್ಲಿ ಅಂಬೇಡ್ಕರ್ ತತ್ವವನ್ನು ಹಿಡಿದುಕೊಂಡು ಎಲ್ಲ ಕಡೆ ಸಂಘಟನೆ ಮಾಡುತ್ತಿದ್ದ ಅ ಮೂಲಕ ಹತ್ತಾರು ಜನ ಪರಿಚಯವಾಗಿದ್ದರೂ ಅವರಲ್ಲಿ ಮೋರೆ ಎನ್ನುವವನು ಪ್ರಮುಖನು ಈತ ಕುಲಜನಾಗಿದ್ದ ಕಾಂಬಳೆ ತನ್ನ ವಂಶಕ್ಕನುಗುಣವಾಗಿ ಆಗಾಗ ಕನಸು ಕಂಡವನಂತೆ ತಾನು ರಾಜಕುಮಾರ ಒಂದಾನೊಂದು ಸಂಸ್ಥಾನದಲ್ಲಿ ರಾಜನ ಮಗನಾಗಿ ಹುಟ್ಟಿರಬಹುದೆಂಬ ಚಹರೆಗಳನ್ನು ಹುಡುಕುತ್ತಿದ್ದನು. ವೈದ್ಯ ಹೇಳಿದ್ದು, ರೋಗಿ ಬಯಸಿದ್ದು ಹಾಲು ಅನ್ನ ಎಂಬಂತೆ ಈತನು ಮೂಲತಃ ಕುರುಂದವಾಡ ಸಂಸ್ಥಾನದ ರಾಜನ ಮಗನಾಗಿ ಜನಿಸಿ ದುರಾದೃಷ್ಟವಶಾತ್ ವಡಗಾಂವ ಗ್ರಾಮದ ಹೊಲಗೇರಿಯ ಜಾನೋಬಾ ದಂಪತಿಯ ಸಾಕು ಮಗನಾಗಿ ಬೆಳೆಯುತ್ತಾನೆ. ತದನಂತರ ತಾನು ಮಹಾರ್ ಅಲ್ಲ ನಿಜಕ್ಕೂ ಮರಾಠಿಗ ಎಂದು ಗೊತ್ತಾದ ಮೇಲೆ ತನ್ನ ಕುಟುಂಬವು ದಲಿತ ಜನಾಂಗವೆಂದು ದೂರಿಕರಿಸಲು ತೀರ್ಮಾನಿಸುತ್ತಾನೆ. ಆಗ ಹೆಂಡತಿ ಸುಮತಿಯ ಜೊತೆಯಲ್ಲಿ ಮಾತು ಮಾತಿಗೂ ನಿನ್ನ ಜಾತಿಯು ನಿನ್ನ ಸಂಸಾರವನ್ನು ತಿಳಿಸುತ್ತದೆ. ಹಾಗಾಗಿ ನೀನು ನಮ್ಮಂತಹ ಉನ್ನತ ಜಾತಿಯವರಿಗೇ ಗೌರವ ಕೊಟ್ಟು ಮಾತನಾಡಲು ಎಲ್ಲಿ ಬರುತ್ತದೆ. ಎಂದು ಸಿಟ್ಟಿನಿಂದ ಕೆಟ್ಟದಾಗಿ ನುಡಿಯುತ್ತಾನೆ. ಈಕೆಗೂ ಇವನ ಚುಚ್ಚು ಮಾತುಗಳನ್ನು ಆಲಿಸಿ ಬೇಸರಗೊಂಡಿದ್ದ ಸುಮತಿ ನಿನ್ನನ್ನು ಮದುವೆ ಆಗದೇ ಇದ್ದಿದ್ರೆ ನನಗೇನು ಬೇರೆ ಗಂಡ ಸಿಗುತ್ತಿರಲಿಲ್ವಾ ಒಂದು ಕೆಲಸ ಮಾಡಿ ನಿಮಗೆ ಅಷ್ಟು ತಾಕತ್ತಿದ್ದರೆ ಮರಾಠರ ಓಣೆಲೀ ಬಾಡಿಗೆಗೆ ಮನೆ ಕೇಳಿಕೊಂಡು ಬನ್ನಿ ಆಗ ಯಾರಾದರೂ ಕೊಡುತ್ತಾರೋ ನೋಡೋಣ ಇಷ್ಟೆಲ್ಲಾ ಮಾತಾಡ್ತೀರಲ್ಲಾ ಮದುವೆಗೆ ಮುಂಚೆ ನಮ್ಮ ಮನೆಯಲ್ಲಿ ಏಂಟೆಂಟು ದಿನ ಉಳಿದುಕೊಂಡಿದ್ದಿರಾ ಆಗ ನಮ್ಮ ಜಾತಿ ಬಗ್ಗೆ ಸಂಸ್ಕಾರದ ಬಗ್ಗೆ ನಿಮಗೆ ಚೆನ್ನಾಗಿ ಗೊತ್ತಿತ್ತು. ಈಗ ಯಾರೋ ತಲೆ ಕೆಟ್ಟಿದ್ದರಿಂದ ನಿಮ್ಮ ಮೂಲ ಜಾತಿಯ ಜಾಡು ಸಿಕ್ಕಿ ನಮ್ಮ ಕುಟುಂಬವನ್ನು ತಿರಸ್ಕರಿಸುತ್ತಾ ಹಿಯಾಳಿಸುವುದು ಸರಿಯಲ್ಲ ಭೂಮಿ ಮೇಲೆ ಜನಿಸಿದ ಬುದ್ಧಿ ಶಕ್ತಿಯುಳ್ಳ ಪ್ರತಿ ಮಾನವನಿಗೆ ಅವನದೇ ಆದ ಆತ್ಮ ಗೌರವ ಇರುತ್ತದೆ. ಅದು ಬಿಟ್ಟು ಮೇಲ್ವರ್ಗದವರು ಶ್ರೇಷ್ಠ, ಕೆಳವರ್ಗದವರು ಕನಿಷ್ಠ ಎಂಬ ಭೇದ–ಭಾವದ ಮಾತು ಆಡಬಾರದು ಎಂದು ತಿಳುವಳಿಕೆ ಹೇಳಿದಾಗ ಕಾಂಬಳೆ ಅದಾವುದಕ್ಕೂ ಸೊಪ್ಪು ಹಾಕದೆ ಗತ್ತಿನಿಂದ ಹೆಂಡತಿಯು ಎನ್ನದೆ ಆಕೆಯನ್ನೇ ಹೊಗೇ ರಂಡೆ ಎಂದು ಬೈಗುಳವಾಡಿ ನಾನು ಕುರಂದವಾಡ ರಾಜನ ಮಗ ಮನಸ್ಸು ಮಾಡಿದರೆ ಇಡೀ ಬೆಳಗಾವಿಯನ್ನೇ ಕೊಂಡುಕೊಳ್ಳುತ್ತೇನೆ ಎಂದು ಸಿಟ್ಟಿನಿಂದ ಪ್ರಹಾರ ಮಾಡುತ್ತಾನೆ. ಹೀಗೆ ಇಬ್ಬರಲ್ಲೂ ಆಕಸ್ಮಿಕವಾಗಿ ಚಿಕ್ಕ ಚಿಕ್ಕ ವಿಷಯಗಳಿಗೂ ದೊಡ್ಡ ರಾದ್ದಾಂತವಾಗುತ್ತಿತ್ತು. ಅದಕ್ಕೆ ಕಳವಳಗೊಂಡ ಸುಮತಿ ಇಂಥವನ ಜೊತೆಯಲ್ಲಿ ಬಾಳ್ವೆ ನಡೆಸುವುದು ಹೇಗೆ ಧರ್ಮದ ಪಿತ್ತ ತಲೆ ಹೊಕ್ಕವನಿಗೇ ಸರಿದಾರಿಗೇ ಹೇಗೆ ತರುವುದು ಸುಖ ಸುಮ್ಮನೆ ಅಂಬೇಡ್ಕರ್ ಮತ್ತು ಶಿವಾಜಿಯವರ ಫೋಟೋದ ವಿಚಾರವಾಗಿ ನಾನು ಪ್ರತಿಭಟಿಸಬಾರದಿತ್ತು. ಏಕೆಂದರೇ ಅಂಬೇಡ್ಕರ್‌ಗೂ ನನಗೂ ಏನು ಸಂಬಂಧ ನನಗೆ ಗಂಡ ಮುಖ್ಯನೋ ಅಂಬೇಡ್ಕರ್ ಮುಖ್ಯನೋ ಕಾಂಬಳೆಗೆ ನಾನು ಮುಖ್ಯನೋ ಶಿವಾಜಿ ಮುಖ್ಯನೋ ಹೀಗೇ ತನ್ನ

ಮೇಲೆ ಪ್ರಶ್ನೆ ಮಾಡಿಕೊಳ್ಳುತ್ತ ಹಳೆಯ ನೆನಪುಗಳನ್ನು ಮೇಲುಕು ಹಾಕುತ್ತಾ, ಮುಂದೇನು ಆಗುತ್ತದೋ ನೋಡೋಣ ಎಂದು ಸುಮ್ಮನಿರುತ್ತಾಳೆ. ಇಲ್ಲಿ ಗಂಡ–ಹೆಂಡಿರಾಗುವುದಕ್ಕೂ ಮುಂಚೆ ಅ ವ್ಯಕ್ತಿಗಳಿಬ್ಬರು ಯಾವುದೇ ವರ್ಗಕ್ಕೆ ಸೇರಿರಲಿ ಬಳಿಕ ನಿರ್ದಿಷ್ಟವಾಗಿ ಒಂದು ವರ್ಗವನ್ನು ಆರಿಸಿಕೊಂಡು ದಾಂಪತ್ಯ ಜೀವನವನ್ನು ಸುಖಕರವಾಗಿ ನಿರ್ವಹಿಸಬೇಕಾದದ್ದು ದಂಪತಿಗಳಾದವರ ಕರ್ತವ್ಯ ಕಾರಣ ನಿಮ್ಮ ವಂಶದ ಕುಡಿಗಳು ದಂಪತಿಗಳನ್ನೇ ಅನುಸರಿಸುವುದರಿಂದ ಅ ಮಕ್ಕಳಿಂದ ನಾವು ಸಮಾಜಕ್ಕೆ ಯಾವ ಕೊಡುಗೆಯನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ಮನುಷ್ಯ ನಾಲ್ಕು ಆಶ್ರಮಗಳನ್ನು ಪ್ರತ್ಯೇಕವಾಗಿ ಅನುಭವಿಸಿ ತನ್ನ ಕರ್ತವ್ಯ ಮುಗಿಸಬೇಕು.

"ಆದ್ರ ಈಗಾಗಲೇ ನೀವ ಹೊಲೇರಕೀನ ಮದುವಿ ಮಾಡಿಕೊಂಡಿರಿ. ಆಕಿಗಿ ಎರಡ ಮಕ್ಕಳಾ ಹಡದೀರಿ. ನೀವು ಬೆಳೆದದ್ದ ಪರಿಸರ, ಸಂಸ್ಕಾರ ಎಲ್ಲಾ ಹೊಲೇರದ ಐತಿ" ಎಂಬ ಮೋರೆನ ಮಾತುಗಳು ಮಾದೇವನ ಕಿವಿಯಲ್ಲೀಗ ಗುಂಯ್‌ಗುಟ್ಟುತ್ತಿದ್ದವು"(ಹೊಲಗೇರಿಯ ರಾಜಕುಮಾರ, ಕಾದಂಬರಿ ಪು.ಸಂ 98). ಕಛೇರಿಯಲ್ಲಿ ಮಾದೇವ, ಮೋರೆ, ಕೋಲ್ಕರ್ ಮೊದಲಾದವರು ಜಾತಿ ವಿಚಾರವಾಗಿ ಚರ್ಚಿಸುತ್ತ ಜೊತೆ–ಜೊತೆಯಲ್ಲಿ ನೌಕರರನ್ನು ಹೇಗೆ ಸಂಘಟಿಸಬೇಕು ಮುಂತಾದ ವಿಚಾರಗಳನ್ನು ಹೇಳುತ್ತಾ ಕೊನೆಗೆ ಮಾದೇವನೇ ತನ್ನ ಹೆಂಡತಿ ವಿಚಾರವಾಗಿ ಹೀಯಾಳಿಸುತ್ತ ಕೋಲ್ಕರ್‌ನಿಗೆ ಖಂಡಪಟ್ಟೆ ಬೈಯ್ಯುತ್ತಾನೆ. ಮೊದಲು ನನಗೇ ರಾಜ್ಯ ಸಿಕ್ಕಲಿ ನನ್ನ ಆಡಳಿತದಲ್ಲಿ ಒಬ್ಬೊಬ್ಬರದ್ದು ಚರ್ಮ ಸುಲೀತ್ತಿನಿ ಎಂದು ಖುರ್ಚಿಗೆ ಒರಗಿ ಕುಳಿತಾಗ ಮೋರೆ ಆಡಿದ ಮಾತುಗಳು ಗುಂಯ್‌ಗುಟ್ಟುತ್ತಿದ್ದವು. ಅದೇನೇಂದರೆ ಕಾಂಬಳೆ ನೀನು ಹೊಲೇರ ಹೆಣ್ಣು ಮಗಳನ್ನು ಮದುವೆ ಆಗಿ ಆಕೆ ಎರಡು ಮಕ್ಕಳು ಹಡೆದಿದ್ದಾಳೆ. ಸರಿಯಾಗಿ ನೋಡಿದರೆ ನೀನು ಬೆಳೆದ ಪರಿಸರ ಕಲಿತುಕೊಂಡ ಸಂಸ್ಕಾರ ಎಲ್ಲವು ಥೇಟ್ ಹೊಲೇಯರ ರೀತಿಯಲ್ಲಿ ಇದ್ದಾವೆ. ಅದು ಬಿಟ್ಟು ನಮ್ಮ ಜನಾಂಗದ ಸಂಸ್ಕಾರಗಳು ಹೇಗೆ ಬರಲು ಸಾಧ್ಯ ಎಂದು ಟೀಕಿಸುತ್ತಾನೆ. ಇದನ್ನೇ ಆಧಾರವಾಗಿಟ್ಟುಕೊಂಡು ಕಾಂಬಳೆ ಬಾಬ್ಯಾ ಎಂಬುವವನು ನೆನಪು ಮಾಡಿಕೊಳ್ಳುತ್ತಾನೆ. ಆತ ಮರಾಠನಾಗಿದ್ದರು ಸಂಸ್ಕಾರದಲ್ಲಿ ಎಲ್ಲಾ ವ್ಯತಿರಿಕ್ತವಾಗಿದೆ. ಹೇಗೆಂದರೆ ವಿಮಲಿ ಎಂಬ ವೇಶ್ಯೆಯ ಮನೆಯಲ್ಲಿ ತಂಗಿ, ದಿನ ಹೆಂಡ ಕುಡಿಯುತ್ತಾ ದನದ ಮಾಂಸ ತಿನ್ನುತ್ತಾ ಬದುಕುತ್ತಾನೆ. ಅನ್ಯ ಸ್ತ್ರೀಯನ್ನು ಕೆಣಕಿ ಚಪ್ಪಲಿಯಿಂದ ಹೊಡಿಸಿಕೊಂಡು ಮೋರಿಯಲ್ಲಿ ಬಿದ್ದು ಹೊರಳಾಡಿದರು. ಜನ ಮಾತ್ರ ಅವನಿಗೆ ಮರಾಠಿಯಾರ ಬಾಬ್ಯಾ ಎಂದು ಗೌರವಿಸುತ್ತಾರೆ. ಇಲ್ಲಿ ಒಂದು ಸಣ್ಣ ವ್ಯತ್ಯಾಸ ನಾನು ಕೂಡ ದನದ ಮಾಂಸ ತಿನ್ನುತ್ತೇನೆ ನಿಜ. ಆದರೆ ಕುಡಿಯುವುದಿಲ್ಲ ಸುಮತಿಯನ್ನು ಬಿಟ್ಟು ಬೇರೆ ಹೆಣ್ಣನ್ನು ಕಣ್ಣೆತ್ತಿಯು ನೋಡುವುದಿಲ್ಲ, ನಾನು ಜಾತಿಯಿಂದ ಶ್ರೇಷ್ಠ ಮರಾಠ ಅರಮನೆಯಲ್ಲೇ ಹುಟ್ಟಿದವನು. ಬೆಳೆದಿದ್ದು ಮಾತ್ರ ಹೊಲೇಯರ ಮನೆಯಲ್ಲಿ, ಆದ ಕಾರಣ ಎಲ್ಲರು ನನ್ನನ್ನು ಹೊಲೇಯ ಎಂದು ಕರೆಯಬಹುದೇ. ಹೀಗೆ ಮಾದೇವ ಕಾಂಬಳೆ ತನ್ನ ಜಾತಿಯನ್ನು ಅದರ ಮೂಲವನ್ನು ಇತರರು ನನ್ನನ್ನು ಸಂಭೋಧಿಸಿ ಕರೆಯುವುದನ್ನು ಹೋಲಿಕೆ ಮಾಡುತ್ತಾ ನೌಕರಿಯ ಜಾಗದಲ್ಲಿ ಮನೆಗೆ ಬಂದಾಗ ಮನೆಯಲ್ಲಿ ಕೋಪ ಮಿಶ್ರಿತ ಭಾಷೆಯಲ್ಲಿ ಸಂಭಾಷಿಸುತ್ತಾನೆ. ಆದರೆ ನಮಗೆಲ್ಲಾ ತಿಳಿಯಬೇಕಾದ ಸಂಗತಿ ಎಂದರೇ ವಿಷಯ ಏನೇ ಇರಲಿ ಸಂದರ್ಭ ಯಾವುದೇ ಬರಲಿ ಕುಟುಂಬದ ವಿಚಾರವನ್ನು ಆಫೀಸಿಗೂ ಆಫೀಸಿನ ವಿಚಾರವನ್ನು ಕುಟುಂಬಕ್ಕೂ ತಾಳೆಯಾಕಿ ನೋಡಬಾರದು ಕಾರಣ ಜೀವನ ದೀರ್ಘಯುವಲ್ಲ ಕಡಿಮೆ ಸಮಯದ್ದು ಅದರಲ್ಲಿ ಸಾಧ್ಯವಾದಷ್ಟು ಸಂತೋಷಕ್ಕೆ ಜಾಗ ಕೊಡಬೇಕೆ ಹೊರತು ದುಃಖಕಲ್ಲ.

ಈ ಕಾದಂಬರಿಯನ್ನು ಅವಲೋಕನ ಮಾಡಿದಾಗ ದಲಿತರ ಬದುಕಿನ ವಿವಿಧ ಆಯಾಮಗಳನ್ನು ತಿಳಿಯಲು ಸಾಧ್ಯವಾಗಿ ಮೇಲ್ವರ್ಗದವರ ದರ್ಪ, ದಬ್ಬಾಳಿಕೆ ನೇರವಾಗಿ ಮೋಸಮಾಡುವುದು ದಲಿತರಲ್ಲಿಯೇ ಎತ್ತಿಕಟ್ಟಿ ಜಗಳವಾಡಿಸುವುದು, ಜಾತಿ–ಜಾತಿಗಳ ನಡುವೆ ವಿಷ ಬೀಜ ಬಿತ್ತುವುದು, ಆ ಮೂಲಕ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳುವ ಚಾಲಾಕಿತನವನ್ನು ಹೊಂದಿರುತ್ತಾರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

**ಆಕರ ಗ್ರಂಥ**


- ಶಿವರುದ್ರ ಕೆ. ಕಲ್ಲೋಳಿಕರ. (1994). *ಹೊಲಗೇರಿಯ ರಾಜಕುಮಾರ.* ಲಡಾಯಿ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (1988). *ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ.* ಕನ್ನಡ ಸಂಸ್ಕೃತಿ ಇಲಾಖೆ.
- ಅರ್ಜುನ ಗೊಳಸಂಗಿ. (2004). *ದಲಿತ ಬದುಕು ಮತ್ತು ಸಂಸ್ಕೃತಿ.* ವಿಮೋಚನಾ ಪ್ರಕಾಶನ.
- ಚಂದ್ರಶೇಖರ್, ಎಚ್.ಎಸ್. (2004). *ಕನ್ನಡದಲ್ಲಿ ದಲಿತ ಬಂಡಾಯ ಕಾದಂಬರಿಗಳು ಒಂದು ಅಧ್ಯಯನ.* ಸ್ನೇಹ ಪ್ರಕಾಶನ.
- ಚಂದ್ರಶೇಖರ್. ಟಿ. ಆರ್. (ಸಂ.) (2005). *ದಲಿತ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಚಿನ್ನಸ್ವಾಮಿ ಸೋಸಲೆ. (2006). *ದಲಿತರ ಮೇಲಿನ ದೌರ್ಜನ್ಯ ಒಂದು ನೋಟ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.